ಕರಾಸಕೈಅನಿನಿ
**ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ**
**(ಕರ್ನಾಟಕ ಸರ್ಕಾರದ ಒಂದು ಉದ್ಯಮ)**
**ನೊಂದಾಯಿತ ಕಛೇರಿ:** ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560010
ದೂರವಾಣಿ:080-23407011-25 ಇ–ಮೈಲ್:kssidcho@karnataka.gov.in ವೆಬ್‌ಸೈಟ್:www.kssidc.co.in

ಸಂಖ್ಯೆ: ಸಮನ್ವಯ:ನಿವೇಶನ:ಹಂಚಿಕೆ ಪುನರ್ ಸ್ಥಾಪನೆ:2024

ದಿನಾಂಕ 09.08.2024

## ತಿಳುವಳಿಕೆ ಪ್ರಕಟಣೆ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಕೈಗಾರಿಕಾ ನಿವೇಶನಗಳನ್ನು ಹಂಚಿಕೆ ಪಡೆದಿರುವ ಹಂಚಿಕೆದಾರರು ಹಂಚಿಕೆ ನಿಯಮಾವಳಿಗಳಂತೆ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಕೈಗಾರಿಕಾ ವಸಾಹತುಗಳಲ್ಲಿನ ಹಂಚಿಕೆದಾರರು 02 ವರ್ಷಗಳ ಒಳಗೆ, ಇತರೆ ಬೇರೆ ಎಲ್ಲಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಕೈಗಾರಿಕಾ ವಸಾಹತುಗಳಲ್ಲಿನ ಹಂಚಿಕೆದಾರರು 05 ವರ್ಷಗಳ ಒಳಗೆ ತಮಗೆ ಹಂಚಿಕೆಯಾಗಿರುವ ನಿವೇಶನಗಳಲ್ಲಿ, ನೀಲಿ ನಕ್ಷೆ ಅನುಮೋದನೆ ಪಡೆದು, ಕೈಗಾರಿಕಾ ಕಟ್ಟಡ ನಿರ್ಮಿಸಿ, ವಿದ್ಯುತ್ ಸಂಪರ್ಕ ಪಡೆದು ಕೈಗಾರಿಕಾ ಚಟುವಟಿಕೆ ಪ್ರಾರಂಭಿಸಬೇಕೆಂಬ ನಿಯಮವಿರುತ್ತದೆ.

ಆದರೆ ಬಹುತೇಕ ಕೈಗಾರಿಕಾ ನಿವೇಶನಗಳ ಹಂಚಿಕೆದಾರರು ಈ ಕಾಲಾಮಿತಿಯೊಳಗೆ ನಿಯಮಾನುಸಾರ ಕೈಗಾರಿಕಾ ಕಟ್ಟಡವನ್ನು ನಿರ್ಮಿಸಿ, ಕೈಗಾರಿಕಾ ಚಟುವಟಿಕೆ ಪ್ರಾರಂಭಿಸಿರುವುದಿಲ್ಲ. **ನಿಗಮದ ಹಂಚಿಕೆ ನಿಯಮ ಹಾಗೂ ಕರಾರು ಒಪ್ಪಂದ ಕರಾರುಗಳನ್ನು ಉಲ್ಲಂಘಿಸಿರುವ ಕೈಗಾರಿಕಾ ನಿವೇಶನಗಳ ಹಂಚಿಕೆದಾರರಿಗೆ ಒಂದು ಅವಕಾಶ ನೀಡುವ ನಿಟ್ಟಿನಲ್ಲಿ ದಂಡವನ್ನು ಪಾವತಿಸಿ, ಹಂಚಿಕೆ ಪುನರ್ ಸ್ಥಾಪನೆ ನೀಡಿ, ಹಂಚಿಕೆಯಾದ ನಿವೇಶನಗಳಲ್ಲಿ ನಿಯಮಾನುಸಾರ ಕಟ್ಟಡವನ್ನು ನಿರ್ಮಿಸಿ, ಕೈಗಾರಿಕಾ ಚಟುವಟಿಕೆ ಪ್ರಾರಂಭಿಸಲು ದಿನಾಂಕ 22.06.2015 ರಿಂದ ಹಂಚಿಕೆದಾರರಿಗೆ ಅವಕಾಶ ಮಾಡಿಕೊಡಲಾಗಿರುತ್ತದೆ ಹಾಗೂ ಇದನ್ನು ಕಾಲಾಕಾಲಕ್ಕೆ ವಿಸ್ತರಿಸಲಾಗಿರುತ್ತದೆ. ಮುಂದುವರೆದು, ಈ ಅವಕಾಶವನ್ನು ದಿನಾಂಕ 30.09.2024ರವರೆಗೆ ಕೊನೆಯದಾಗಿ ವಿಸ್ತರಿಸಲಾಗಿರುತ್ತದೆ.** ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಸಂಬಂಧಪಟ್ಟ ಎಲ್ಲಾ ಹಂಚಿಕೆದಾರರುಗಳಿಗೆ ತಿಳಿಸಲಾಗಿದೆ. ಒಂದು ವೇಳೆ ಇದರ ಸದುಪಯೋಗಪಡಿಸಿಕೊಂಡು ನಿಯಮಗಳಂತೆ ಕೈಗಾರಿಕಾ ಚಟುವಟಿಕೆ ಆರಂಭಿಸದೇ ಇದ್ದ ಪಕ್ಷದಲ್ಲಿ ಹಂಚಿಕೆ ಮಾಡಿರುವ ನಿವೇಶನಗಳನ್ನು ರದ್ದುಪಡಿಸಿ ನಿಗಮದ ಸುಪರ್ಧಿಗೆ ಪಡೆದು, ಹಂಚಿಕೆದಾರರು ಪಾವತಿಸಿರುವ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ವ್ಯವಸ್ಥಾಪಕ ನಿರ್ದೇಶಕರು**